**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.321/2023**

**CW - 4 PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ನೂರಸಾಬ |
| ತಂದೆ | ಃ | ಅಯ್ಯನಸಾಬ |
| ವಯಸ್ಸು | ಃ | 38 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಬೂದಿನಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **25-06-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ನನ್ನ ಹೆಂಡತಿ, ಚಾಸಾ-5 ನನ್ನ ಅಕ್ಕ, ಚಾಸಾ-6 ನನ್ನ ಅಳಿಯ. ಆರೋಪಿತರು ಗೊತ್ತು. ಈಗ 4 ವರ್ಷಗಳ ಹಿಂದೆ ಬೆಳಿಗ್ಗೆ 8 ಗಂಟೆಗೆ ನಾನು ನನ್ನ ದ್ವಿಚಕ್ರ ವಾಹನದ ಮೇಲೆ ಜಮೀನಿಗೆ ಹೋಗುತ್ತಿದ್ದಾಗ ಮಾರೆಮ್ಮ ಗುಡಿ ಹತ್ತಿರ 1 ನೇ ಆರೋಪಿ ಬಂದು ಜೆ-ಫಾರಂ ಮಾಡಿಸಿಕೊಂಡು ಎಂದು ನನ್ನ ಎದೆಯ ಮೇಲಿನ ಅಂಗಿ ಹಿಡಿದು ಎಳೆದುಕೊಂಡು ನನ್ನ ಮನೆಗೆ ಹೋದನು. ನನ್ನ ಹೆಂಡತಿ ನಮ್ಮ ಮನೆಯಲ್ಲಿ ಅಡುಗೆ ಮಾಡುತ್ತಿದ್ದಾಗ 1 ನೇ ಆರೋಪಿ ನನ್ನ ಹೆಂಡತಿಯನ್ನು ಮನೆ ಒಳಗಿನಿಂದ ಸೀರೆ ಹಿಡಿದು ಎಳೆದುಕೊಂಡು ಮನೆ ಹೊರಗೆ ತಂದಿರುತ್ತಾರೆ. 1 ನೇ ಆರೋಪಿ ಚಪ್ಪಲಿಯಿಂದ ನನ್ನ ಹೆಂಡತಿಗೆ ಹೊಡೆದಿರುತ್ತಾಳೆ. ಉಳಿದ ಆರೋಪಿತರು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಎಳೆದಾಡಿ ಕೈಯಿಂದ ನಮಗೆ ಹೊಡೆದಿರುತ್ತಾರೆ. ನಂತರ ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು:- ಆರೋಪಿತರ ಪರ ಶ್ರೀ ವಿಎಂಎಂ ವಕೀಲರಿಂದ**

ಚಾಸಾ-5 ನನ್ನ ಅಕ್ಕ. ಚಾಸಾ-6 ನನ್ನ ಅಳಿಯ. ಘಟನೆ ನಡೆದ ದಿನಾಂಕ ತಿಂಗಳು ವರ್ಷ ಹೇಳಲು ಬರುವುದಿಲ್ಲ. ನನ್ನ ದ್ವಿಚಕ್ರ ವಾಹನದ ನಂ. ಆ ಸಮಯದಲ್ಲಿ ಹೊಸ ಗಾಡಿ ಆಗಿದ್ದರಿಂದ ಇನ್ನೂ ಬಂದಿರುವುದಿಲ್ಲ. ತಾತ್ಕಾಲಿಕ ನಂ. ನಮೂದು ಮಾಡಿಲ್ಲ. ಸದರಿ ವಾಹನ ನನ್ನ ಹೆಸರಿನಲ್ಲಿ ಇತ್ತು. ಪೋಲಿಸರಿಗೆ ದ್ವಿಚಕ್ರ ವಾಹನದ ದಾಖಲಾತಿಗಳನ್ನು ನೀಡಿಲ್ಲ. ಮಾರೆಮ್ಮ ಗುಡಿಯಿಂದ ನನ್ನ ಮನೆ ಅಂದಾಜು 200 ಮೀ ಅಂತರ ಇದೆ. ಮಾರೆಮ್ಮ ಗುಡಿಯಿಂದ ನನ್ನ ಮನೆ ಉತ್ತರಕ್ಕೆ ಇರುತ್ತದೆ. ಸದರಿ ಗುಡಿ ಹತ್ತಿರ 4-5 ಜನರು ಇದ್ದರು. ಅವರ ಹೆಸರು ಹೇಳಲು ಬರುವುದಿಲ್ಲ. ನನ್ನ ಹೆಂಡತಿ ಗುಡಿ ಹತ್ತಿರ ಬಂದಿರಲಿಲ್ಲ ಮನೆಯಲ್ಲಿ ಇದ್ದಳು. ಮನೆಯಲ್ಲಿ ನನ್ನ ಹೆಂಡತಿ ಒಬ್ಬಳೇ ಇದ್ದಳು. ನಮ್ಮ ಮನೆ ಪೂರ್ವಕ್ಕೆ ಬಾಬು ಮನೆ, ಪಶ್ಚಿಮಕ್ಕೆ ಖಾಸಿಂ ಸಾಬ ಮನೆ, ಉತ್ತರಕ್ಕೆ ಮೈನುದ್ದೀನ್ ಮನೆ ಮತ್ತು

ದಕ್ಷಿಣಕ್ಕೆ ಮಲ್ಲಪ್ಪ ಮನೆ ಇರುತ್ತದೆ. ಜಗಳ ನಡೆದಾಗ ಅಕ್ಕ-ಪಕ್ಕ ಜನರು ಬಂದಿರಲಿಲ್ಲ. ನನ್ನ ಮತ್ತು ಚಾಸಾ-5 ರವರ ಮನೆ ನಡುವೆ ಅಂದಾಜು 100 ಮೀ ಅಂತರ ಇರುತ್ತದೆ. ನನ್ನ ಮತ್ತು ಚಾಸಾ-5 ರವರ ಮನೆ ನಡುವೆ 2 ಮನೆಗಳು ಬರುತ್ತವೆ. ಸದರಿ ಘಟನೆ ನಮ್ಮ ಮನೆಯಲ್ಲಿ ಆಗಿರುತ್ತದೆ. ಆರೋಪಿತರು ನನಗೆ ಕೈಯಿಂದ ದೇಹದ ಎಲ್ಲ ಭಾಗಕ್ಕೆ ಹೊಡೆದಿರುತ್ತಾರೆ. ಆದರೆ ಯಾವ ಭಾಗಕ್ಕೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪ್ರಕರಣದಲ್ಲಿನ ಚಪ್ಪಲಿ ನನ್ನ ಹೆಂಡತಿಯದು ಇರುತ್ತದೆ. ಯಾವ ಕಾಲಿನ ಚಪ್ಪಲಿ ಎಂದು ಹೇಳಲು ಬರುವುದಿಲ್ಲ. ಚಪ್ಪಲಿ ನಾಸಿಕ ಕಲರ್ ಆಗಿರುತ್ತದೆ. ಸದರಿ ಚಪ್ಪಲಿ ಯಾವುದರಿಂದ ಮಾಡಲಾಗಿರುತ್ತದೆ ಹೇಳಲು ಬರುವುದಿಲ್ಲ.

ನಾನು 1 ನೇ ಆರೋಪಿಗೆ ಜಮೀನನ್ನು ಮಾರಾಟ ಮಾಡಿದ್ದೆ. ಸದರಿ ಘಟನೆ ನಡೆದ 1 ವರ್ಷದ ಮೊದಲು ಖರೀದಿ ಪತ್ರ ಮಾಡಿಕೊಟ್ಟಿದ್ದೆ. ಸದರಿ ಖರೀದಿ ಪತ್ರ ನೊಂದಣಿ ಆಗಿರುತ್ತದೆ. ಅದರ ಸ.ನಂ.109 ರಲ್ಲಿ 2 ಎಕರೆ ಹಿರೇ ಬೂದೂರು ಗ್ರಾಮದಲ್ಲಿ ಇರುತ್ತದೆ. ಖರೀದಿ ಕೊಡುವ ಪೂರ್ವದಲ್ಲಿ ಸದರಿ ಜಮೀನು ನನ್ನ ಹೆಸರಿಗೆ ಇತ್ತು. ಘಟನೆ ಪೂರ್ವದಲ್ಲಿ ಪಹಣಿಯಲ್ಲಿ ಖರೀದಿ ಪಡೆದವರ ಹೆಸರು ಬಂದಿರಲಿಲ್ಲ. ಜೆ-ಫಾರಂ ಬಾರದೇ ಇರುವುದರಿಂದ ಖರೀದಿದಾರರ ಹೆಸರು ಪಹಣಿಯಲ್ಲಿ ಬಂದಿರಲಿಲ್ಲ. ಪೋಲಿಸರಿಗೆ ಪಹಣಿ ನೀಡಿಲ್ಲ. ಪೋಲಿಸರು ನನ್ನ ಹೇಳಿಕೆಯಲಿ ಏನು ಬರೆದಿರುತ್ತಾರೆ ಗೊತ್ತು. ಹೇಳಿಕೆ ಪಡೆದ ದಿನಾಂಕ ತಿಂಗಳು ವರ್ಷ ಗೊತ್ತಿಲ್ಲ. ಹೇಳಿಕೆಯನ್ನು ನನಗೆ ಓದಿ ಹೇಳಿರುತ್ತಾರೆ. ಪೋಲಿಸರಿಗೆ ನಾನು ನೀಡಿದ ಹೇಳಿಕೆಯಲ್ಲಿ ನನ್ನ ಹೆಂಡತಿ ಮನೆಯಲ್ಲಿ ಅಡುಗೆ ಮಾಡುತ್ತಿರುವ ಸಂಗತಿಯನ್ನು ಹೇಳಿರುತ್ತೇನೆ. ಆ ಕುರಿತು ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮತ್ತು ನಮ್ಮ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಜಮೀನು ಕುರಿತು ನ್ಯಾಯಾಲಯದಲ್ಲಿ 3 ದಾವೆಗಳು ನಡೆದಿರುತ್ತವೆ ಎಂದರೆ ಸರಿ. 2 ನೇ ಆರೋಪಿ ನಮ್ಮ ವಿರುದ್ಧ ಒಂದು ದಾವೆ ಮಾಡಿದ್ದು ನಾನು ಮತ್ತು ನನ್ನ ತಾಯಿ ಹಾಗೂ ಅಣ್ಣ ಸೇರಿ 2 ದಾವೆಗಳನ್ನು ಮಾಡಿರುತ್ತೇವೆ ಎಂದರೆ ಸರಿ. ಜಮೀನುಗಳ ಕುರಿತು ಆರೋಪಿತರ ಮತ್ತು ನಮ್ಮ ನಡುವೆ ವೈಮನಸ್ಸು ಇದುದ್ದರಿಂದ ಯಾವುದೇ ಘಟನೆ ನಡೆಯದಿದ್ದರೂ ಆರೋಪಿರ ವಿರುದ್ಧ ಚಾಸಾ-1 ರವರ ಮೂಲಕ ಸುಳ್ಳು ದೂರನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.321/2023**

**CW - 3 PW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಸವರಾಜ |
| ತಂದೆ | ಃ | ಮರಿಯಪ್ಪ |
| ವಯಸ್ಸು | ಃ | 47 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಬೂದಿನಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **25-06-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿ ಪಂಚನಾಮೆಯ ಮೇಲಿನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:- ಮಾನ್ಯ ಸ.ಸ.ಅ ರವರಿಂದ**

ದಿನಾಂಕ 27-02-2022 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆ ಅವಧಿಯಲ್ಲಿ ಚಾಸಾ-8 ರವರು ತೋರಿಸಿದ ಘಟನಾ ಸ್ಥಳದಲ್ಲಿ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲು**:-** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ನ್ಯಾಯಾಲಯ, ದೇವದುರ್ಗ.**

**CC No.321/2023**

**CW - 2 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಸ್ಸಪ್ಪ |
| ತಂದೆ | ಃ | ಸಿದ್ದಯ್ಯ |
| ವಯಸ್ಸು | ಃ | 40 |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಬೂದಿನಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **25-06-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಈಗ 4 ವರ್ಷಗಳ ಹಿಂದೆ ಬೆಳಿಗ್ಗೆ 10 ರಿಂದ 11 ಗಂಟೆ ವರೆಗೆ ಪೋಲಿಸರು ಚಾಸಾ-1 ರವರುತ ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆ ಮೇಲೆ ಇದ್ದ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದುಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:-</u> ಆರೋಪಿತರ ಪರ ಶ್ರೀ ವಿಎಂಎಂ ವಕೀಲರಿಂದ**

ಪಂಚನಾಮೆ ಮಾಡಿದ ದಿನಾಂಕ ತಿಂಗಳು ವರ್ಷ ಹೇಳಲು ಬರುವುದಿಲ್ಲ. ಬೆಳಿಗ್ಗೆ 10 ಗಂಟೆಗೆ ನನ್ನನ್ನು ಗುನ್ನ ಸ್ಥಳಕ್ಕೆ ಕರೆಸಿರುತ್ತಾರೆ. ಸದರಿ ಘಟನ ಸ್ಥಳ ಮಾರೆಮ್ಮ ಗುಡಿ ಹತ್ತಿರ ಇರುತ್ತದೆ. ದೇವಸ್ಥಾನದ ಪೂರ್ವ ದಿಕ್ಕಿಗೆ ಮುಖ ಮಾಡಿ ಇರುತ್ತದೆ. ಗುಡಿ ಮುಂದೆ 20-30 ಮನೆಗಳು ಇರುತ್ತವೆ. ಸದರಿ ಗುಡಿ ಹಿಂದೆ ಪಶ್ಚಿಮಕ್ಕೆ ಆಂಜನೇಯ್ಯ ಗುಡಿ, ಉತ್ತರಕ್ಕೆ ಮನೆಗಳು ಇರುತ್ತವೆ ಸದರಿ ಮನೆಗಳು ಯಾರಿಗೆ ಸೇರಿದ್ದು ಗೊತ್ತಿಲ್ಲ, ದಕ್ಷಿಣಕ್ಕೆ ದಾರಿ ಇರುತ್ತದೆ. ಪಂಚನಾಮೆಯನ್ನು ಗುಡಿ ಪೂರ್ವಕ್ಕೆ ಮಾಡಿರುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಗಬ್ಬೂರು ಠಾಣೆಯಲ್ಲಿ ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸಲ ಒಂದು ಸಲ ನನ್ನ ಸಹಿ ಪಡೆದಿರುತ್ತಾರೆ. ನನ್ನ ಜೊತೆ ಚಾಸಾ-3 ರವರ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.